**CC 3085/2023**
**PW-01**

**ಸಾಕ್ಷಿಗೆ ದಿನಾಂಕ: 22.07.2025 ರಂದು ಕರೆದು ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಆರೋಪಿ ಪರ ವಕೀಲರ ಶ್ರೀ RBD ರವರಿಂದಃ**

ನಾನು ಉಗರಖೋಡ ನಿವಾಸಿ. ನಾನು ಆಶಾ ಕಾರ್ಯಕರ್ತೆ ಅಂತಾ ನಮ್ಮ ಊರಿನಲ್ಲಿ ಕೆಲಸ ಮಾಡುತ್ತೇನೆ. ಈ ಪ್ರಕರಣವನ್ನು ಹೂಡಲು ನಾನು ವಕೀಲರಿಗೆ ಮಾಹಿತಿಯನ್ನು ಕೊಟ್ಟಿರುತ್ತೇನೆ. ನನಗೆ ಪ್ರತಿ ತಿಂಗಳು 6-8 ಸಾವಿರ ಸಂಬಳ ಬರುತ್ತದೆ. ನಮ್ಮ ಮನೆಯಲ್ಲಿ ಒಟ್ಟು 9 ಜನ ಇರುತ್ತೇವೆ. ನಮ್ಮ ಮನೆಯ ಸಂಪೂರ್ಣ ಜವಾಬ್ದಾರಿ ನನ್ನ ಮೇಲೆ ಇರುತ್ತದೆ ಎಂದರೆ ಸರಿಯಲ್ಲ. ನಾನು ಸದ್ಯ ನನ್ನ ಗಂಡನ ಜೊತೆ ಇರುವುದಿಲ್ಲ. ನನಗೆ ಒಬ್ಬ ಮಗ ಇರುತ್ತಾನೆ. ನನ್ನ ಮಗ ಪ್ರಥಮ ಪಿಯುಸಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾನೆ. ನನ್ನ ಮಗನ ಎಲ್ಲಾ ಖರ್ಚನ್ನು ನಾನೇ ನೋಡಿಕೊಳ್ಳುತ್ತೇನೆ ಎಂದರೆ ನಿಜ. ಸಾಕ್ಷಿಯು ಮುಂದುವರೆದು ನನ್ನ ತಂದೆಯು ಸಹ ಸಹಾಯ ಮಾಡುತ್ತಾರೆ ಎಂದು ಹೇಳುತ್ತಾರೆ.

ಆರೋಪಿತನು ನನಗೆ 2016 ರಿಂದ ಪರಿಚಯ ಇರುತ್ತಾರೆ. ಆರೋಪಿತನು ಬೆಳಗಾವಿಯ ನಿವಾಸಿಯಾಗಿದ್ದು, ಸದರಿಯವರು ಮೆಡಿಕಲ್ ಆಫೀಸರ ಎಂದು ಕರ್ತವ್ಯ ಮಾಡುತ್ತಿರುತ್ತಾರೆ. ಆರೋಪಿತನ ಹತ್ತಿರ ನಾನು ನನ್ನ ಪೆಸೆಂಟ್ ಗಳನ್ನು ಕರೆದುಕೊಂಡು ಹೋಗುತ್ತಿದ್ದೇನು ಎಂದರೆ ನಿಜ. ಹೀಗಾಗಿ ಆರೋಪಿತನು ನನಗೆ ಸಾಕಷ್ಟು ಸಹಾಯ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನಾನು ಹೆಚ್ಚಾಗಿ ಆರೋಪಿತನು ಸಾಂಬ್ರಾದ ಆಸ್ಪತ್ರೆಗೆ ಪೇಸೆಂಟ್ ಗಳನ್ನು ಕರೆದುಕೊಂಡು ಹೋಗುತ್ತಿದ್ದೇನು. ಆರೋಪಿತನು ಆಸ್ಪತ್ರೆಯಲ್ಲಿ ಇಲ್ಲದ ಸಮಯದಲ್ಲಿಯೂ ಸಹ

ಅವರ ಆಸ್ಪತ್ರೆಗೆ ಹೋಗಿರುತ್ತೇವೆ ಎಂದರೆ ಸರಿಯಲ್ಲ.

ಆರೋಪಿತನು 2018 ರಲ್ಲಿ ನನಗೆ ಹಣ ಬೇಕೆಂದು ಕೇಳಿರುತ್ತಾರೆ. ಮಲ್ಲಿಕಾರ್ಜುನ ನಿಂಬಣ್ಣವರ ಯಾರು ಎಂದು ನನಗೆ ಗೊತ್ತು. ಸದರಿ ಮಲ್ಲಿಕಾರ್ಜುನ ನಿಂಬಣ್ಣವರ ಇವರು ಆರೋಪಿತನ ವಿರುದ್ದ ಒಂದು ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮಲ್ಲಿಕಾರ್ಜುನ ಇವರು ಆರೋಪಿತನ ವಾಹನವನ್ನು ಮಾರಾಟಕ್ಕಿಟ್ಟ ವ್ಯವಹಾರದಲ್ಲಿ ಪರಿಚಯ ಆಗಿರುತ್ತಾರೆ. ಆರೋಪಿತನು ಆಸ್ಪತ್ರೆಯನ್ನು ಪ್ರಾರಂಭ ಮಾಡಲು 10 ಲಕ್ಷಗಳವರೆಗೆ ಹಣ ಕೇಳಿರುತ್ತಾರೆ. ಆಗ ನಾನು ಅವರಿಗೆ ಸ್ವಲ್ಪ ಸ್ವಲ್ಪ ಹಣ ಕೊಡುತ್ತಾ ಬಂದಿರುತ್ತೇನೆ. ನಾನು ನನ್ನ ಪಿರ್ಯಾದಿಯಲ್ಲಿ ಉಳಿತಾಯ ಮಾಡಿದ 6 ಲಕ್ಷ ಹಣವನ್ನು ಕೊಟ್ಟಿರುತ್ತೇನೆ ಎಂದು ಹೇಳಿದಂತೆ ದಾಖಲೆಗಳು ಇರುತ್ತವೆ. ನಾನು ಆರೋಪಿತನಿಗೆ ಯಾವುದೇ ರೀತಿಯಲ್ಲಿ 6 ಲಕ್ಷ ಹಣವನ್ನು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿತನಿಗೆ ಹಣ ಕೊಟ್ಟ ಬಗ್ಗೆ ಇರುವ ದಾಖಲೆಗಳನ್ನು ಹಾಜರುಪಡಿಸುತ್ತೇನೆ. ನಾನು ಆರೋಪಿತನಿಗೆ ಒಟ್ಟು 10 ಲಕ್ಷಗಳನ್ನು ಸುಮಾರು 2-3 ತಿಂಗಳಲ್ಲಿ ಕೊಟ್ಟಿರುತ್ತೇನೆ. ನಾನು 6 ಲಕ್ಷವನ್ನು ನಮ್ಮ ಅಣ್ಣ ಹಾಗೂ ನನ್ನ ತಂದೆಯ ಹತ್ತಿರ ಕೇಳಿ ಆರೋಪಿಗೆ ಕೊಟ್ಟಿರುತ್ತೇನೆ. ಈ ಪ್ರಕರಣದಲ್ಲಿ ನನ್ನ ಅಣ್ಣ ಮತ್ತು ತಂದೆಯನ್ನು ಸಾಕ್ಷ್ಯ ಮಾಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

ಆರೋಪಿತನಿಗೆ 6 ಲಕ್ಷ ಹಣವನ್ನು ಎಲ್ಲಿ ಮತ್ತು ಹೇಗೆ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು ಒಮ್ಮೆ 2 ಲಕ್ಷ ಹಣವನ್ನು ಕೊಟ್ಟಿರುತ್ತೇನೆ ಹಾಗೂ ಕೆಲವು ಹಣವನ್ನು ಬ್ಯಾಂಕ ಮುಖಾಂತರ ಹಾಗೂ ಇನ್ನೂ ಕೆಲವು ಹಣ ನಗದು ರೂಪದಲ್ಲಿ ಕೊಟ್ಟಿರುತ್ತೇನೆ ಎಂದು ಹೇಳುತ್ತಾರೆ. ಆರೋಪಿತನಿಗೆ ಕೆಲವು ಹಣವನ್ನು ಅವರ

ಖಾತೆಗೆ ಜಮಾ ಮಾಡಿರುತ್ತೇನೆ. ಸದರಿಯವರು ಖಾತೆಗೆ ಒಟ್ಟು ಎಷ್ಟು ಹಣ ಹಾಕಿರುತ್ತೇನೆ ಎಂದು ನನಗೆ ಈಗ ನೆನಪಿರುವುದಿಲ್ಲ.

ನನ್ನ ಪಿರ್ಯಾದಿಯಲ್ಲಿ ಹೇಳಿದಂತೆ ಬಂಗಾರವನ್ನು 2018 ರ ಏಪ್ರಿಲ್ ನಲ್ಲಿ ಕಿತ್ತೂರಿನ ಮುತ್ತುಟ ಫೈನಾನ್ಸ ನಲ್ಲಿ ಅಡವಿಟ್ಟು ಹಣವನ್ನು ಆರೋಪಿತನಿಗೆ ಕೊಟ್ಟಿರುತ್ತೇನೆ. ಹೀಗೆ ಅಡವಿಟ್ಟ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಾನು ಹೇಳಿದಂತೆ ಯಾವುದೇ ಬಂಗಾರವನ್ನು ಅಡವಿಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಆರೋಪಿತನಿಗೆ ಹಣ ಕೊಟ್ಟ ಬಗ್ಗೆ ಯಾವುದಾದರೂ ದಾಖಲೆ ಇದೆ ಎಂದರೆ ಸಾಕ್ಷಿಯೂ ರೇಕಾರ್ಡಿಂಗ್ ಇದೆ ಎಂದು ಹೇಳುತ್ತಾರೆ. ಆರೋಪಿತನು ನನಗೆ ಕೊಟ್ಟ ಚೆಕ್ SBI ಬ್ಯಾಂಕ್ ಚೆಕ್ ಆಗಿತ್ತು. ಸದರಿ ಚೆಕ್ ನಂಬರ ನನಗೆ ಈಗ ನೆನಪಿಲ್ಲ. ಸದರಿ ಚೆಕ್ ನ್ನು ಆರೋಪಿತನೆ ಬರೆದು ಸಹಿ ಮಾಡಿ ನನಗೆ ಕೊಟ್ಟಿರುತ್ತಾನೆ. ಸದರಿ ಚೆಕ್‌ನ್ನು ಉಜ್ವಲ ನಗರ ಆಸ್ಪತ್ರೆಯಲ್ಲಿ ಬರೆದುಕೊಟ್ಟಿರುತ್ತಾರೆ.

**ಈ ಹಂತದಲ್ಲಿ ವಕೀಲರು ಮುಂದಿನ ಪಾಟೀ ಸವಾಲಿಗೆ ಸಮಯವನ್ನು ಕೋರಿದ್ದು, ಆಲಿಸಿ ಸಮಯ ನೀಡಿ ಪಾಟೀ ಸವಾಲನ್ನು ಮುಂದೂಡಲಾಯಿತು.**

*(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಿಸಲಾಯಿತು).*

ಓ ಹೇ ಕೇ ಸರಿ ಇದೆ

**ಪ್ರ.ದ.ನ್ಯಾ.ದಂ. ಕಿತ್ತೂರು.**